# ಶ್ರೀ ಪುರಂದರದಾಸರು

**— ಸಂಗ್ರಹ : ಎ.ಬಿ. ಶ್ಯಾಮಾಚಾರ್ಯ**

## ಜೀವನ ಹಾಗೂ ವ್ಯಕ್ತಿತ್ವ – ರಸಪ್ರಶ್ನೆಗಳು

1. ಶ್ರೀ ಪುರಂದರದಾಸರ ಗುರುಗಳು ಯಾರು? — ಶ್ರೀವ್ಯಾಸರಾಜರು
2. ಶ್ರೀ ಪುರಂದರದಾಸರ ಅಂಕಿತವೇನು? — ಪುರಂದರ ವಿಠಲ
3. ಶ್ರೀ ಪುರಂದರದಾಸರು ಜೀವಿಸಿದ ಕಾಲ ಯಾವುದು? — ಕ್ರಿ.ಶ. 1484–1564
4. ವರದಪ್ಪನಾಯಕರು ವಾಸಿಸಿದ್ದ ಸ್ಥಳ ಯಾವದು? — ಪುರಂದರಗಡ
5. ವರದಪ್ಪನಾಯಕರ ಸ್ಥಳ ಅಂದಿನ ಯಾವ ಸಾಮ್ರಾಜ್ಯಕ್ಕೆ ಸೇರಿದ್ದಿತು? — ವಿಜಯನಗರ ಸಾಮ್ರಾಜ್ಯ
6. ಪುರಂದರಾಸರ ತಂದೆಯ ಹೆಸರೇನು? — ವರದಪ್ಪನಾಯಕ
7. ಯಾವ ದೈವವನ್ನು ಸೇವಿಸಿದ್ದರಿಂದ ಪುರಂದರದಾಸರು ಜನಿಸಿದರು? — ಶ್ರೀನಿವಾಸನನ್ನು
8. ಪುರಂದರದಾಸರು ಯಾವ ಗೋತ್ರದವರು? — ವಶಿಷ್ಠಗೋತ್ರ
9. ಪುರಂದರಾಸರು ಯಾವ ವೇದಶಾಖೆಯವರು? — ಯಜುಷ್ ಶಾಖೆ
10. ಪುರಂದರದಾಸರು ಜನಿಸಿದ ಕಾಲ ಯಾವದು? ಕ್ರಿ.ಶಕ ಹಾಗೂ ಶಾ.ಶಕ ತಿಳಿಸಿ — ಕ್ರಿ.ಶ. 1484, ಶಾ.ಶ. 1406
11. ವರದಪ್ಪನಾಯಕರು ಹುಟ್ಟಿದ ಶಿಶುವಿಗೆ ಇಟ್ಟ ಹೆಸರೇನು? — ಶ್ರೀನಿವಾಸನಾಯಕ
12. ವರದಪ್ಪನಾಯಕರು ಮಾಡುತ್ತಿದ್ದ ವ್ಯಾಪಾರ ಯಾವದು? — ರತ್ನಪಡಿ ವ್ಯಾಪಾರ
13. ಶ್ರೀನಿವಾಸನಾಯಕರಿಗೆ ಉಪನಯನ ಆದದ್ದು ಯಾವಾಗ ? — ಕ್ರಿ.ಶ. 1494
14. ಶ್ರೀನಿವಾಸನಾಯಕರಿಗೆ ಮದುವೆಯಾದಾಗ ಅವರ ವಯಸ್ಸು ಎಷ್ಟು? — ಸು. 18 ವರ್ಷ
15. ಶ್ರೀನಿವಾಸನಾಯಕರ ಹೆಂಡತಿಯ ಹೆಸರೇನು? — ಸರಸ್ವತೀಬಾಯಿ
16. ಶ್ರೀನಿವಾಸನಾಯಕರು ಮಾಡುತ್ತಿದ್ದ ವೃತ್ತಿಗೆ ಇದ್ದ ಇನ್ನೊಂದು ಹೆಸರೇನು? — ಚಿನಿವಾರ ವೃತ್ತಿ
17. ಕೋಟ್ಯಾವಧಿ ಧನ ಸಂಪಾದಿಸುತ್ತಿರುವಾಗ ಶ್ರೀನಿವಾಸನಾಯಕರನ್ನು ಏನೆಂದು ಕರೆಯುತ್ತಿದ್ದರು? — ನವಕೋಟಿನಾರಾಯಣ
18. ಶ್ರೀನಿವಾಸನಾಯಕರಿಗೆ ಇದ್ದ ಮಕ್ಕಳು ಎಷ್ಟು? — ನಾಲ್ಕು ಗಂಡು ಮಕ್ಕಳು
19. ಪುರಂದರದಾಸರ ಚರಿತ್ರೆಯ ಬಗ್ಗೆ ಪ್ರಥಮವಾದಿ ಕೃತಿ ರಚಿಸಿದ ದಾಸರು ಯಾರು? — ವಿಜಯದಾಸರು
20. ಶ್ರೀಹರಿ ವೃದ್ಧಬ್ರಾಹ್ಮಣ ವೇಷದಲ್ಲಿ ಶ್ರೀನಿವಾಸನಾಯಕನ ಬಳಿ ಬಂದದ್ದು ಏಕೆ? — ಉದ್ಧರಿಸಲೆಂದು
21. ಬ್ರಾಹ್ಮಣ ಯಾವ ಉದ್ದೇಶದ ನೆವದಿಂದ ನಾಯಕರ ಬಳಿ ಬಂದ ? — ಮಗನ ಮುಂಜಿಗೆಂದು
22. ನಾಯಕರು ಬ್ರಾಹ್ಮಣನನ್ನು ಅನೇಕ ಸಲ ತಿರುಗಾಡಿಸಿ ಕಡೆಗೆ ಕೊಟ್ಟದ್ದು ಏನು ? — ಒಂದು ಸವಕಲ ನಾಣ್ಯ
23. ಬ್ರಾಹ್ಮಣ ದಾನ ಪಡೆಯದೆ ಯಾರ ಬಳಿಗೆ ಹೋದರು? — ಹೆಂಡತಿ, ಸ.ಬಾ.ಬಳಿಗೆ
24. ಸರಸ್ವತೀಬಾಯಿ ಬಳಿಗೆ ಬಂದ ಬ್ರಾಹ್ಮಣನಿಗೆ ದಾನವಾಗಿ ಕೊಟ್ಟದ್ದು ಏನು? — ತನ್ನ ಮೂಗುತಿ
25. ಬ್ರಾಹ್ಮಣ ಮೂಗುತಿಯನ್ನು ನಾಯಕರಿಗೆ ಕೊಟ್ಟು ಬದಲಾಗಿ ಕೇಳಿದ್ದು ಏನನ್ನು? — ಹಣವನ್ನು
26. ಪತಿಗೆ ಹೆದರಿದ ಸರಸ್ವತೀ ಬಾಯಿ ಏನನ್ನು ಮಾಡಲು ಯತ್ನಿಸಿದರು? — ವಿಷಪಾನ
27. ಪತಿಗೆ ಹೆದರಿ ವಿಷಪಾನ ಮಾಡಲು ಹೊರಟ ಸರಸ್ವತಿಬಾಯಿಗೆ ವಿಷದ ಬಟ್ಟಲಲ್ಲಿ ಸಿಕ್ಕಿದ್ದು ಏನು? — ಅದೇ ಮೂಗುತಿ
28. ನಾಯಕರಿಗೆ ಸರಸ್ವತೀ ಬಾಯಿ ಏನನ್ನು ತಂದು ಒಪ್ಪಿಸಿದರು ? — ತನ್ನ ಮೂಗುತಿಯನ್ನು
29. ನಾಯಕರು ಅಂಗಡಿಗೆ ತಿರುಗಿಬಂದು ಇಟ್ಟಿದ್ದ ಮೂಗುತಿ ಪೆಟ್ಟಿಗೆಯನ್ನು ತೆಗೆದು ನೋಡಲು ಕಂಡದ್ದು ಏನು?— ಖಾಲಿ ಪೆಟ್ಟಿಗೆ
30. ಮೂಗುತಿ ಕಥೆಯಿಂದ ನಾಯಕರಿಗೆ ತಿಳಿದದ್ದು ಏನು? — ಶ್ರೀ ಹರಿಯ ಲೀಲೆ
31. ಮೂಗುತಿ ಕಥೆಯಿಂದ ನಾಯಕರಲ್ಲಿ ಆದ ಪರಿಣಾಮವೇನು ? — ಎಲ್ಲವು ನಶ್ವರವೆಂದು, ವೈರಾಗ್ಯಭಾವ
32. ಮೂಗುತಿ ನೆಪದ ಘಟನೆಯಿಂದ ನಾಯಕರಿಗೆ ಭಗವಂತ ಮಾಡಿದ್ದೇನು? — ಪರೀಕ್ಷೆ
33. ಶ್ರೀಹರಿಯ ಲೀಲೆಯನ್ನು ಅರಿತ ನಾಯಕರು ನಂತರ ಮಾಡಿದ್ದೇನು ? — ವೈರಾಗ್ಯ ತಾಳಿ ಎಲ್ಲವನ್ನು ಕೃಷ್ಣಾರ್ಪಣ ಎಂದರು

34. ನಾಯಕರು ಮನೆ, ಧನ, ಧಾನ್ಯ ವಾಹನಾದಿಗಳನ್ನು ಏನನ್ನಾಗಿ ಕಂಡರು ? — ತೃಣಕೆ ಸಮಾನವಾಗಿ

35. ನಾಯಕರ ಯಾವ ಗುಣ ಎಲ್ಲವನ್ನು ತ್ಯಜಿಸುವಂತೆ ಮಾಡಿತು? — ಶ್ರೀಹರಿಯಲ್ಲಿಯ ನಂಬಿಕೆ ಹಾಗೂ ವೈರಾಗ್ಯ

36. ಈ ಘಟನೆಗೆ ಯಾರನ್ನು ನೆನೆದು ತೃಪ್ತರಾದರು? — ಹೆಂಡತಿಯನ್ನು

37. ನಾಯಕರು ಹೊಂದಿದ ವೈರಾಗ್ಯದಿಂದ ಪಡೆದು ಕೊಂಡದ್ದು ಏನು? — ಶ್ರೀಹರಿಯಲ್ಲಿ ರಕ್ತಿ, ಸಂಸಾರದಲ್ಲಿ ವಿರಕ್ತಿ

38. ನಾಯಕರ ಈ ವರ್ತನೆಗೆ ಹೆಂಡತಿ ಮಕ್ಕಳ ಒಪ್ಪಿಗೆ ಇತ್ತೆ ? — ಪೂರ್ಣಸಮ್ಮತಿಸಿದ್ದರು

39. ಮನೆಯಿಂದ ಹೊರಬಂದ ನಾಯಕರು ಅವಲಂಬಿಸಿದ ವೃತ್ತಿ ಯಾವದು? — ದಾಸವೃತ್ತಿ

40. ನಾಯಕರು ಹೊರ ಹೊರಟಾಗ ಅನುಸರಿಸಿದ ಹತ್ತಿರದವರು ಯಾರು? — ಹೆಂಡತಿ, ಮಕ್ಕಳು

41. ಪರಿವರ್ತನೆಗೆ ಕಾರಣಳಾದ ಹೆಂಡತಿ ಸರಸ್ವತಿಬಾಯಿಯನ್ನು ಏನೆಂದು ಹರಸಿದರು? — ಹೆಂಡತಿ ಸಂತತಿ - ಸಾವಿರವಿರಲಿ

42. ಶ್ರೀನಿವಾಸನಾಯಕರಿಗೆ ಜ್ಞಾನೋದಯವಾದಾಗ- ಸುಮಾರು ಅವರಿಗಿದ್ದ ವಯಸ್ಸು ಎಷ್ಟು? — 25 - 30 ವರ್ಷ

43. ವೈರಾಗ್ಯವಂತರಾದ ನಾಯಕರು ಯಾವ ಗುರುಗಳನ್ನು ಹುಡುಕಿಕೊಂಡು ಹೊರಟರು? — ಶ್ರೀವ್ಯಾಸರಾಜರನ್ನು

44. ಆ ಕಾಲದಲ್ಲಿ ವಿಜಯನಗರದ ಅರಸರಿಗೆ ಇದ್ದ ರಾಜಗುರುಗಳು ಯಾರು? — ವ್ಯಾಸರಾಜರು

45. ವಿಜಯನಗರದ ಸಾಮ್ರಾಜ್ಯ ಯಾರ ಆಳ್ವಿಕೆಯಿಂದ ಪ್ರಖ್ಯಾತವಾಯಿತು? — ಕೃಷ್ಣದೇವರಾಯ

46. ಶ್ರೀನಿವಾಸನಾಯಕರು ವ್ಯಾಸರಾಜರನ್ನು ಕಂಡಾಗ ಅವರ ವಯಸ್ಸು ಎಷ್ಟು? — ಸುಮಾರು 35 ವರ್ಷ

47. ಶ್ರೀವ್ಯಾಸರಾಜರಿಗೆ ಶ್ರೀನಿವಾಸನಾಯಕರು ಸಂದರ್ಶಿಸಿದಾಗ ವಯಸ್ಸು ಎಷ್ಟು? — ಸುಮಾರು 80 ವರ್ಷ

48. ಶ್ರೀವ್ಯಾಸರಾಜರಲ್ಲಿ ಶಿಷ್ಯತ್ವ ವಹಿಸಿದ್ದ ಪ್ರಸಿದ್ಧ ಮೂರು ಯತಿಗಳು ಯಾರು? — ವಿಜಯೀಂದ್ರರು, ವಾದಿರಾಜರು

49. ಶ್ರೀನಿವಾಸನಾಯಕರಿಗೆ ದೀಕ್ಷೆ ನೀಡಿದ ವ್ಯಾಸರಾಜರು ಯಾವ ಅಂಕಿತವನ್ನು ಪ್ರದಾನಮಾಡಿದರು? — ಪುರಂದರವಿಠಲ

50. ಶ್ರೀವ್ಯಾಸರಾಜರಲ್ಲಿ ಶಿಷ್ಯತ್ವ ವಹಿಸಿದ್ದ ಇಬ್ಬರು ಹರಿದಾಸರು ಯಾರು? — ಪುರಂದರದಾಸರು, ಕನಕದಾಸರು

51. ವಿಜಯದಾಸರು ಉಲ್ಲೇಖಿಸಿದಂತೆ ಪುರಂದರಾಸರ ಮಕ್ಕಳ ಹೆಸರೇನು? — ವರದಪ್ಪ, ಗುರುರಾಯ, ಅಭಿನವಪ್ಪ, ಮಧ್ವಪತಿ

52. ಕಾಮಲಾಪುರದ ಶಾಸನದಂತೆ ಪುರಂದರದಾಸರ ಮಕ್ಕಳ ಹೆಸರೇನು? — ಲಕ್ಷ್ಮಣದಾಸ, ಹೈಬಣ (ಹೇಬಣ್ಣ) ಮಧ್ವಪತಿದಾಸ

53. ಪುರಂದರದಾಸರ ಮಕ್ಕಳು ಅನುಸರಿಸಿದ ವೃತ್ತಿಯಾವದು? — ಹರಿದಾಸವೃತ್ತಿ

54. ಪುರಂದರದಾಸರು ಯಾವ ವೃತ್ತಿಯನ್ನು ಬಲು ಚೆನ್ನದು ಎಂದರು? — ಮಧುಕರವೃತ್ತಿ

55. ಪುರಂದರದಾಸರ ನಾಲ್ಕು ಮಕ್ಕಳ ಅಂಕಿತಗಳು ಯಾವವು?
— ವರದಪುರಂದರ, ಗುರಪುರಂದರ, ಅಭಿನವ ಪುರಂದರ, ಗುರುಮಧ್ವಪತಿವಿಠಲ

56. ಪುರಂದರದಾಸರ ಕೆಲ ಮಹಿಮೆಗಳನ್ನು ಉಲ್ಲೇಖಿಸಿದವರು ಯಾರು? — ವಿಜಯದಾಸರು ಹಾಗೂ ಕೆಲವು ದಾಸರು

57. ಪುರಂದರದಾಸರ ಆರಾಧ್ಯದೈವ ಯಾರು ? — ಪಾಂಡುರಂಗ

58. ಪುರಂದರದಾಸರು ಯಾವ ಸಿದ್ಧಾಂತದ ಅನುಯಾಯಿಗಳು ? — ಮಧ್ವಸಿದ್ಧಾಂತ

59. ಪುರಂದರದಾಸರು ಏನನ್ನು ಧರಿಸಿ ಗೋಪಾಳಕ್ಕೆ ಹೊರಡುತ್ತಿದ್ದರು? — ಮುಂಡಾಸು, ತಂಬೂರಿ, ತಾಳ, ಗೆಜ್ಜೆ, ಜೋಳಿಗೆ

60. ಪುರಂದರಾಸರ ಹೃದಯದಲ್ಲಿದ್ದದ್ದು ಬಾಯಿಂದ ಹೊರಬರುತ್ತಿದ್ದದ್ದು ಏನು ? — ಹರಿನಾಮಕೀರ್ತನೆ

61. ಪುರಂದರದಾಸರು ಹಾಗೂ ಅನ್ನಮಾಚಾರ್ಯರ ಸಮಾಗಮ ಆದದ್ದು ಯಾವಾಗ ? ಎಲ್ಲಿ ?
— ಸುಮಾರು ಕ್ರಿ.ಶ. 2500 ತಿರುಪತಿಯಲ್ಲಿ

62. ದಾಸರ ಹಾಗೂ ಅನ್ನಮಾಚಾರ್ಯರ ಮಿಲನವನ್ನು ದಾಖಲಿಸಿದವರು ಯಾರು? — ಅನ್ನಮಾಚಾರ್ಯರ ಮೊಮ್ಮಗ - ಚನ್ನನ್ನ

63. ಕೃಷ್ಣದೇವರಾಯನ ಆಳ್ವಿಕೆಯ ಕಾಲ ಯಾವುದು? — ಕ್ರಿ.ಶ. 1509-1530

64. ಕೃಷ್ಣದೇವರಾಯನಿಗೆ ಕುಹಯೋಗ ಬಂದದ್ದು ಯಾವಾಗ? — ಕ್ರಿ.ಶ. 1521

65. ಕೃಷ್ಣದೇವರಾಯನ ಕುಹಯೋಗವನ್ನು ಪರಿಹರಿಸಿದವರು ಯಾರು? — ಶ್ರೀ ವ್ಯಾಸರಾಜರು

66. ಶ್ರೀವ್ಯಾಸರಾಜರು ಶ್ರೀವೆಂಕಟೇಶ್ವರನನ್ನು ಪೂಜಿಸಿದ ಕಾಲ ಯಾವುದು. — ಕ್ರಿ.ಶ. 1486-1498

67. ಶ್ರೀವ್ಯಾಸರಾಜರು ವೃಂದಾವನಸ್ಥರಾದಾಗ ಪುರಂದರದಾಸರು ಇದ್ದರೆ? — ಇದ್ದರು.

68. ಪುರಂದರದಾಸರ ಸಮಕಾಲೀನ ಇಬ್ಬರು ಹರಿದಾಸರ ಹೆಸರುಗಳೇನು ? — ಕನಕದಾಸರು, ವೈಕುಂಠದಾಸರು

69. ಪುರಂದರದಾಸರ ಸಮಕಾಲೀನ ತೆಲುಗು ಹರಿದಾಸರು ಯಾರು ? — ಅನ್ನಮಾಚಾರ್ಯರು

70. ಪುರಂದರದಾಸರು ದೀಕ್ಷೆಪಡೆದ ಮೇಲೆ ರಚಿಸಿದ (ಊಹೆ) ಮೊದಲ ಕೃತಿ ಯಾವುದು? — ಇಂದಿನ ದಿನವೇ ಶುಭದಿನವು

71. ಒಮ್ಮೆ ತಿರುಮಲೆಯಲ್ಲಿ 'ವರದಾನೀರುತಾ' ಎಂದು ಪುರಂದರದಾಸರು ಕೇಳಲು ನೀರನ್ನು ತಂದುಕೊಟ್ಟವರು ಯಾರು? — ಮಗನ ರೂಪದಲ್ಲಿ ಬಂದ ಶ್ರೀನಿವಾಸ

72. ಸುವರ್ಣತಂಬಿಗೆಯಲ್ಲಿ ನೀರನ್ನು ತಂದ ಮಗನಿಗೆ ದಾಸರು ಮಾಡಿದ್ದೇನು? — ಅದೇ ತಂಬಿಗೆಯಿಂದ ತಲೆಗೆ ಪೆಟ್ಟು ಹಾಕಿದರು

73. ಶ್ರೀನಿವಾಸ ಈ ಮುಯ್ಯಕ್ಕೆ ಪ್ರತಿಮುಯ್ಯೆಯನ್ನು ಎಲ್ಲಿ ತೀರಿಸಿಕೊಂಡ? — ಪಂಢರಾಪುರದಲ್ಲಿ

74. ದಾಸರರೂಪದ ಪಾಂಡುರಂಗ ತನ್ನ ಯಾವ ಕೈಯ್ಯಕಡಗವನ್ನು ವೇಶ್ಯೆಗೆ ಕೊಟ್ಟ? — ಬಲಗೈ ಕಡಗ

75. ದೇವಸ್ಥಾನದ ಅಧಿಕಾರಿಗಳು ವೇಶ್ಯೆ ಘಟನೆಯಿಂದ ದಾಸರನ್ನು ಏನು ಮಾಡಿದರು? — ದೇವಸ್ಥಾನದ ಕಂಭಕ್ಕೆ ಕಟ್ಟಿ ಹಾಕಿದರು.

76. ದಾಸರಿಗೆ ಅಧಿಕಾರಿಗಳು ಯಾವ ಶಿಕ್ಷೆ ವಿಧಿಸಿದರು? — ಛಾವಟಿ ಏಟು ಹಾಕಿಸಿದರು.

77. ಪುರಂದರದಾಸರು ಈ ಸಮಯದಲ್ಲಿ ಹಾಡಿದ ಕೀರ್ತನೆಯಾವದು? —'ಮಯ್ಯಕ್ಕೆ ಮುಯ್ಯತೀರಿತಯ್ಯ'

78. ಒಮ್ಮೆ ಪುರಂದರದಾಸರು ಮಾಡಿದ ಸಮಾರಾಧನೆಯಲ್ಲಿ ಯಾರು ತುಪ್ಪತಂದು ಬಡಿಸಿದರು? — ಬ್ರಾಹ್ಮಣರೂಪದ ಭಗವಂತ

79. ದಾಸರು ಗೋಪಾಳಕ್ಕೆ ಹೋದಾಗ ಅವರಿಗೆ ತಿಳಿಯದಂತೆ ಜೋಳಿಗೆಗೆ ಮುತ್ತುರತ್ನಗಳನ್ನು ಯಾರು ಹಾಕಿಸುತ್ತಿದ್ದರು? — ಕೃಷ್ಣದೇವರಾಯ

80. ಜೋಳಿಗೆಯಲ್ಲಿರುತ್ತಿದ್ದ ಮುತ್ತುರತ್ನಗಳನ್ನು ದಾಸರು ಏನು ಮಾಡಿದರು? — ಕಣ್ಣೆತ್ತಿನೋಡದೆ ಬಿಸಾಡುತ್ತಿದ್ದರು

81. ದಾಸರು ಪ್ರತಿನಿತ್ಯ ಹೋಗುತ್ತಿದ್ದ ಗೋಪಾಳಕ್ಕಿರುವ ಮತ್ತೊಂದು ಹೆಸರೇನು ? — ಯಾಯವಾರ

82. ದಾಸರು ತಮ್ಮ ಒಬ್ಬ ಮಗ ತೀರಿಕೊಂಡಾಗ ಹಾಡಿದ ಹಾಡು ಯಾವದು? — 'ಗಿಳಿಯು ಪಂಜರದೊಳಿಲ್ಲ'

83. ಕರ್ನಾಟಕ ಸಂಗೀತ ಪಿತಾಮಹ ಎಂಬ ಹೆಗ್ಗಳಿಕೆ ಯಾರಿಗೆ ಸಲ್ಲುತ್ತದೆ? — ಪುರಂದರದಾಸರಿಗೆ

84. ಸಂಗೀತ ಪಾಠಕ್ರಮದಲ್ಲಿ ಪಿಳ್ಳಾರಿಗೀತೆಗಳನ್ನು ರಚಿಸಿದವರು ಯಾರು? — ಪುರಂದರದಾಸರು

85. ಕರ್ನಾಟಕ ಸಂಗೀತವನ್ನು ಪ್ರಚಾರಕ್ಕೆ ತಂದ ದಾಸರು ಯಾರು? — ಪುರಂದರದಾಸರು

86. ಪುರಂದರದಾಸರು ಇಹಲೋಕ ತ್ಯಜಿಸಿದ ಶಕವರ್ಷ ಯಾವುದು? — ರಕ್ತಾಕ್ಷಿ ಸಂವತ್ಸರ

87. ಪುರಂದರದಾಸರು ಇಹಲೋಕ ತ್ಯಜಿಸಿದ ಕ್ರಿ.ಶ. ವರ್ಷ ಯಾವುದು? — ಕ್ರಿ.ಶ. 1564

88. ಪುರಂದರದಾಸರು ಇಹಲೋಕ ತ್ಯಜಿಸಿದ ಮಾಸ ಯಾವುದು? — ಪುಷ್ಯಮಾಸ

89. ಪುರಂದರದಾಸರು ಇಹಲೋಕ ತ್ಯಜಿಸಿದ ದಿನ ಯಾವುದು? — ಅಮಾವಾಸ್ಯ

90. ಪುರಂದರದಾಸರು ಇಹಲೋಕ ತ್ಯಜಿಸಿದ ವಾರ ಯಾವುದು? — ಭಾನುವಾರ

91. ಪುರಂದರದಾಸರು ಇಹಲೋಕ ತ್ಯಜಿಸಿದಾಗ ಅವರ ವಯಸ್ಸು ಎಷ್ಟು? — 84 ವರ್ಷ

92. ಪುರಂದರದಾಸರು ಯಾವ ದೇವತೆಯ ಅವತಾರರೆಂದು ಪ್ರಸಿದ್ಧಿ ಇದೆ? — ನಾರದರು

93. ಪುರಂದರದಾಸರ ನೆನಪಿನಲ್ಲಿ ಇರುವ ಹಂಪಿಯ ಸ್ಥಳ ಯಾವುದು? — ಪುರಂದರದಾಸರ ಮಂಟಪ

## ಸಾಹಿತ್ಯ - ರಸಪ್ರಶ್ನೆಗಳು

94. ಪುರಂದರದಾಸರ ಕೃತಿಗಳನ್ನು ಮೊದಲಬಾರಿಗೆ ಸಂಗ್ರಹಿಸುವ ಕಾರ್ಯ ಯಾರಿಂದಾಯಿತು? — ವಿಜಯದಾಸರಿಂದ

95. ಪುರಂದರದಾಸರ ಒಟ್ಟು ಕೃತಿಗಳ ಸಂಖ್ಯೆಯನ್ನು ತಿಳಿಸಿದವರು ಯಾರು? — ವಿಜಯದಾಸರು

96. ಪುರಂದರದಾಸರಿಂದ ರಚಿಸಲ್ಪಟ್ಟ ಒಟ್ಟು ಕೃತಿಗಳು ಎಷ್ಟು? — 4,75,000

97. ಶ್ರೀವ್ಯಾಸರಾಜರು ಪುರಂದರದಾಸರ ಕೃತಿಗಳನ್ನು ಏನೆಂದು ಕರೆದರು? — ಪುರಂದರೋಪನಿಷತ್

98. ಪುರಂದರದಾಸರ ಕೃತಿಗಳು ಯಾವ ಸಾಹಿತ್ಯ ಪ್ರಕಾರಗಳಲ್ಲಿ ರಚಿತಗೊಂಡಿವೆ? — ಕೀರ್ತನೆಗಳು, ಸುಳಾದಿ, ಉಗಾಭೋಗಗಳು,

99. ಪುರಂದರದಾಸರು ದೀರ್ಘಕೃತಿಗಳನ್ನು ರಚಿಸಿರುವರೆ? — ಕೆಲವು ಮಾತ್ರ.

100. ಪುರಂದರದಾಸರಿಂದ ರಚಿತ ದೇವರನಾಮಗಳು ಎಷ್ಟಿದೆ? — 25,000

101. ದಾಸರು ತೀರ್ಥಕ್ಷೇತ್ರಗಳ ಬಗ್ಗೆ ಎಷ್ಟು ಕೃತಿಗಳನ್ನು ರಚಿಸಿರುವರು? — 1,25,000

102. ದಾಸರು ಒಟ್ಟು ಎಷ್ಟು ಸುಳಾದಿಗಳನ್ನು ರಚಿಸಿರುವರು? — 90,000

103. ಸಂಗೀತ ಪ್ರಪಂಚದಲ್ಲಿ ಪುರಂದರದಾಸರಿಗೆ ಇರುವ ಗೌರವ ಏನು? —ಕರ್ನಾಟಕ ಸಂಗೀತ ಪಿತಾಮಹ

104. ಪ್ರಾರಂಭಿಕ ಸಂಗೀತಾಭ್ಯಾಸಿಗಳಿಗೆ ಪುರಂದರದಾಸರು ಎಂತಹ ಕೃತಿಗಳನ್ನು ರಚಿಸಿಕೊಟ್ಟರು. — ಪಿಳ್ಳಾರಿಗೀತೆಗಳು

105. ಶಾಸ್ತ್ರೀಯ ಸಂಗೀತಾಭ್ಯಾಸಿಗಳಿಗೆ ಸಂಗೀತದ ಪ್ರಾರಂಭಿಕವಾಗಿ ಏನನ್ನು ರಚಿಸಿಕೊಟ್ಟರು? — ಸರಳ-ಜಂಟಿವರಸೆಗಳು
106. ಪುರಂದರದಾಸರ ಉಪಲಬ್ಧವಿರುವ ಪಿಳ್ಳಾರಿಗೀತೆಗಳು ಎಷ್ಟು? — ನಾಲ್ಕು
107. ಪುರಂದರದಾಸರು ಯಾವ ಸಿದ್ಧಾಂತವನ್ನು ಬುನಾದಿಯನ್ನಾಗಿಸಿ ಕೃತಿಗಳನ್ನು ರಚಿಸಿರುವರು? — ಮಧ್ವಸಿದ್ಧಾಂತ
108. ಪುರಂದರದಾಸರ ಉಪಲಬ್ಧ ಕೃತಿಗಳಲ್ಲಿ ಬಳಸಿದ ಒಟ್ಟು ರಾಗಗಳೆಷ್ಟು? — ಸುಮಾರು 30ಕ್ಕು ಹೆಚ್ಚು
109. ಪುರಂದರದಾಸರ ಉಪಲಬ್ಧ ಕೃತಿಗಳಲ್ಲಿ ಬಳಸಿದ ಒಟ್ಟು ತಾಳಗಳೆಷ್ಟು? — ಸುಮಾರು 10 ಕ್ಕೂ ಹೆಚ್ಚು
110. ಪುರಂದರದಾಸರ ಕೃತಿಗಳಲ್ಲಿ ಉಪಲಬ್ಧ ಒಟ್ಟು ಉಗಾಭೋಗಗಳೆಷ್ಟು? — 150 ಕ್ಕೂ ಹೆಚ್ಚು
111. ಪುರಂದರದಾಸರ ಕೃತಿಗಳಲ್ಲಿ ಉಪಲಬ್ಧ ಒಟ್ಟು ಸುಳಾದಿಗಳೆಷ್ಟು? — 60 ಕ್ಕು ಹೆಚ್ಚು
112. ಪುರಂದರದಾಸರ ಕೃತಿಗಳು ಮೊದಲ ಬಾರಿಗೆ ಮುದ್ರಿತಗೊಂಡದ್ದು ಯಾವಾಗ? — ಕ್ರಿ.ಶ. 1850 ರಲ್ಲಿ
113. ಸುಭೋದರಾಮರಾಯರ 'ಹರಿದಾಸ ಕೀರ್ತನ ತರಂಗಿಣಿ'ಯಲ್ಲಿ ಪುರಂದರದಾಸರ ಎಷ್ಟು ಕೃತಿಗಳು ಮುದ್ರಿತಗೊಂಡಿದ್ದವು? — 543 ಕೃತಿಗಳು
114. ಗೋರಾಬಾಳ ಹನುಮಂತರಾಯರು ಒಟ್ಟಿಗೆ ಹೊರತಂದ ಸುಳಾದಿಗಳೆಷ್ಟು? — 55 ಸುಳಾದಿಗಳು
115. ಎಸ್.ಕೆ. ರಾಮಚಂದ್ರರಾವ್ ಎಷ್ಟು ಪುರಂದರದಾಸರ ಕೃತಿಗಳಿಗೆ ಸ್ವರಪ್ರಸ್ತಾರವನ್ನು ಬಳಸಿ ಮೊದಲಬಾರಿಗೆ ಮುದ್ರಿಸಿದರು? — ನೂರು ಕೃತಿಗಳಿಗೆ
116. ಈವರೆಗೆ ಪುರಂದರದಾಸರ ಎಷ್ಟು ಉಪಲಬ್ಧ ಕೃತಿಗಳು ಮುದ್ರಣವನ್ನು ಕಂಡಿವೆ? — ಸುಮಾರು 1400 ಕೃತಿಗಳು
117. ಪುರಂದರದಾಸರ ಸಾಹಿತ್ಯದಲ್ಲಿ ಎದ್ದು ಕಾಣುವ ಎರಡು ವಿಶಿಷ್ಟ ಗುಣಗಳು ಯಾವವು? –ಗೇಯ ಹಾಗೂ ಕಾವ್ಯ ಗುಣಗಳು
118. 'ಲಂಬೋದರ ಲಕುಮಿಕರಾ .........' ಇದು ಎಂತಹ ಹಾಡೆಂದು ಪ್ರಖ್ಯಾತವಿದೆ? — ಪಿಳ್ಳಾರಿ ಗೀತೆ
119. ಶ್ರೀ ವ್ಯಾಸರಾಜರ 'ದಾಸರೆಂದರೆ ಪುರಂದರದಾಸರಯ್ಯ' ಈ ಕೃತಿಯಲ್ಲಿ ಎಷ್ಟು ನುಡಿಗಳಿವೆ? — ಐದು
120. 'ನೀನಿರಲು ನಮಗೇತರ ಭಯವೋ' ......... ಇದು ಯಾರ ಕೃತಿ — ಶ್ರೀ ಪುರಂದರದಾಸರು
121. 'ಎಲ್ಲಿ ಹರಿಕಥಾಪ್ರಸಂಗವೊ ...............' ಈ ಸಾಲನ್ನು ಪೂರ್ತಿಮಾಡಿ — ಅಲ್ಲಿ ಗಂಗಾಯಮುನಾ..... ತೀರ್ಥಗಳು
122. ಯಾವದು ಇಲ್ಲದ ಗಾನವನ್ನು ಶ್ರೀಹರಿ ಕೇಳನು ಎಂದು ದಾಸರೆಂದರು? — ಪ್ರೇಮವಿಲ್ಲದ ಗಾನ
123. ಈ ಹೇಸಿಗೆ ಸಂಸಾರದಲ್ಲಿ ಹೇಗಿದ್ದು ಜಯಿಸಬೇಕು ಎಂದರು? — ಈಸಬೇಕು ಹೀಗೆ
124. ಪುರಂದರದಾಸರು ಬಂಧುಜನರೊಳಗೆ ಹೇಗಿರಬೇಕು ಎಂದು ಹೇಳಿದರು? — ಬೆಲ್ಲವಾಗಿರಬೇಕು
125. ಯಾರ ಗುಲಾಮ ನಾಗುವತನಕ ಮುಕ್ತಿದೊರಕದೆಂದರು? — ಗುರುವಿನ ಗುಲಾಮ
126. ಲಕ್ಷ್ಮೀದೇವಿಯ ಮೇಲೆ ರಚಿಸಿದ ಪ್ರಸಿದ್ಧ ಕೃತಿ ಯಾವುದು? — ಭಾಗ್ಯಾದಲಕ್ಷ್ಮೀಬಾರಮ್ಮ
127. ಪುರಂದರದಾಸರು ರಚಿಸಿದ ಪ್ರಸಿದ್ಧ ತಾರತಮ್ಯದ ಕೀರ್ತನೆಯಾವುದು? — ಸತತ ಗಣನಾಥ ........
128. 'ನಾನೇನು ಮಾಡಿದೆನೊ ವೆಂಕಟರಾಯ ನೀಯನ್ನ ಕಾಯಬೇಕು' ಇದು ಯಾರ ಕೃತಿ? — ಪುರಂದರದಾಸರದ್ದು
129. 'ನಿನ್ನ ನೋಡಿ ಧನ್ಯನಾದೆನೊ ........... ಹೇ ಶ್ರೀನಿವಾಸ' ಇದು ಯಾರ ಕೃತಿ? — ಪುರಂದರದಾಸರದ್ದು
130. ತ್ಯಾಗರಾಜರು ಯಾರ ಕೃತಿಗಳಿಂದ ಪ್ರಭಾವಿತರಾದರು? — ಪುರಂದರದಾಸರ
131. 'ಪ್ರಾಕೃತ ಭಾಷೆಯಲಿ ನೀ ಕೃತಿ ಪೇಳಿ ಅಪ್ರಾಕೃತ ಹರಿಯಿಂದ ಸ್ವೀಕೃತ ನೀನಾದೆ' ಇದನ್ನು ಯಾರು ಯಾರಿಗಾಗಿ ಹೇಳಿದರು? — ಜಗನ್ನಾಥದಾಸರು, ಪುರಂದರದಾಸರಿಗೆ
132. ಅಂಕಿತವಿಲ್ಲದ ದೇಹ, ಕಾವ್ಯ ........... ಇರಬಾರದೆಂದು ಯಾರು ಹೇಳಿದರು? — ಪುರಂದರದಾಸರು
133. ಪುರಂದರರ ಸಾಹಿತ್ಯದಲ್ಲಿ ಕನಕದಾಸರ ಉಲ್ಲೇಖವಿದೆಯೆ? — ಉಲ್ಲೇಖವಿದೆ
134. ಪುರಂದರದಾಸರು ತಮ್ಮ ಪತ್ನಿಯನ್ನು ಪ್ರಶಂಶಿಸಿದ ಕೃತಿ ಯಾವದು? — ಆದದೆಲ್ಲಾ ಒಳಿತೇ ಆಯಿತು
135. 'ವಾಸುದೇವನ ಚರಣವನಜ ವಂದಿಪನೆ' ಇದು ಯಾರ ಬಗ್ಗೆ ಬರೆದ ಕೀರ್ತನೆ? — ವ್ಯಾಸರಾಜರ ಬಗ್ಗೆ
136. 'ಹರಿದಾಸರ ಸಂಗ ದೊರೆಕಿತು ಎನಗೀಗ ಇನ್ನೇನಿನ್ನೇನು' ಇದು ಯಾರ ಮಾತು? — ಪುರಂದರದಾಸರದು
137. ಪುರಂದರದಾಸರು ಯಾವ ವೃತ್ತಿಯನ್ನು 'ಬಲು ಚನ್ನದು' ಎಂದರು? — ಮಧುಕವೃತ್ತಿಯನ್ನು
138. ಪುರಂದರದಾಸರು ಪುರಂದರವಿಠಲನ ಬಂಟನಾಗದವನನ್ನು ಏನೆಂದರು? — ಲೊಳಲೊಟ್ಟೆ ಎಂದರು
139. ಪುರಂದರದಾಸರ 'ರಾಗಿತಂದೀರಾ ಬಿಕ್ಷಕೆ ರಾಗಿ ತಂದೀರಾ' ಕೃತಿಯಲ್ಲಿ ಎಷ್ಟು ನುಡಿಗಳಿವೆ? — ಒಂಬತ್ತು
140. 'ಅನುಗಾಲವು ಚಿಂತೆ ಜೀವಕೆ' ಈ ಕೃತಿಯಲ್ಲಿ ಚಿಂತೆಗೆ ವಿಷಯಗಳು ಯಾವವು? — ಸತಿ, ಪುತ್ರ, ಧನ ಮೊದಲಾದವು

141. ಪುರಂದರದಾಸರು ಮಾಡಿದ ಶಿವನ ಮೇಲಿನ ಪ್ರಖ್ಯಾತ ಕೃತಿ ಯಾವದು? — ಕಂಡೆ ಕರುಣ ನಿಧಿಯ......

142. ಪುರಂದರದಾಸರು ರಚಿಸಿದ ದೇವತಾ ತಾರತಮ್ಯವನ್ನು ಪಠಿಸುವ ಪದ್ಯ ಯಾವದು? — ಸತ್ಯಜಗಕಿದು...

143. ಮುಕುತಿ ದೊರೆಯಲು ಗುರುವಿಗೆ ಏನಾಗಿರಬೇಕೆಂದು ಹೇಳಿದರು? — ಗುಲಾಮ

144. ಮತದೊಳು ಒಳ್ಳೆಮತವು - ಪಾವನಮತವು ಯಾವುದೆಂದು ಹೇಳಿದರು? — ಮಧ್ವಮತವು

145. ಕೋಟಿ ಕೋಟಿ ಭೃತ್ಯರಿರಲು ಹಾಟಕಾಂಬರನ ಸೇವೆ ಮಾಡುತ್ತಿರುವವರು ಯಾರು? — ಲಕುಮಿ

146. 'ವಿದಿತ ದೈವಗಳೆಲ್ಲ ವಿಷ್ಣುವಿನ ಹಿಂದೆ' ಎಂಬುದನ್ನು ಸಾಧಿಸಲು ಎಂತಹ ಶಪಥವನ್ನು ದಾಸರು ಮಾಡಿದರು?
— 'ಫಣಿಫಣವ ಕೈಯಾಗೆ ಪಿಡಿವೆ'

147. 'ಈ ಪರಿಯ ಸೊಬಗು........' ದೇವರನಾಮದಲ್ಲಿ 'ದೇವತ್ವದಲಿ ನೋಡೆ ..........' ಯಾರೆಂದು ಹೇಳಿರುವರು?
— ದಿವಿಜರೊಡೆಯ

148. ಪುರಂದರದಾಸರ 'ಸರ್ವಾಪರಾಧವ ಕ್ಷಮಿಸಯ್ಯ ಎನ್ನ' ಇದು ಯಾವ ರಾಗದಲ್ಲಿದೆ? — ಶಂಕರಾಭರಣ

149. 'ಮುಂಜಾನೆ ಎದ್ದು ಗೋವಿಂದ ಎನ್ನಿ' ಇದು ಯಾವ ರಾಗದಲ್ಲಿದೆ? — ಆನಂದಭೈರವಿ

150. 'ಡಂಗುರವ ಸಾರಿರಯ್ಯ ಡಿಂಕರಿಕರೆಲ್ಲರು' ಇದು ಯಾವ ತಾಳದ ಕೃತಿ? — ಆದಿತಾಳ

151. 'ನಾರಾಯಣ ನಿನ್ನ ನಾಮದ ಸ್ಮರಣೆಯ ..... ನಾಲಿಗ್ಗೆ ಬರಲಿ' ಪೂರ್ತಿಮಾಡಿ. — ಸಾರಮೃತವೆನ್ನ

152. 'ನೀನ್ಯಾಕೊ ನಿನ್ನ ಹಂಗ್ಯಾಕೋ ನಿನ್ನ ........ ಬಲವೊಂದಿದ್ದರೆ ಸಾಕೊ' ಪೂರ್ತಿಮಾಡಿ — ನಾಮದ

153. 'ಧಾಳಿ ಬಾರದ ಮುನ್ನ ಧರ್ಮದ ಗಳಿಸಿರೊ' ಇದು ಯಾವ ಪಲ್ಲವಿಯಿಂದ ಪ್ರಾರಂಭವಾಗಿದೆ? — ಮಾನವ ಜನ್ಮ ದೊಡ್ಡದು

154. 'ಮಧ್ವಮತಾಬ್ಧಿಯಲಿ ಮೀನಾಗಿ ಇರಬೇಕು' ಇದು ಯಾವ ಪಲ್ಲವಿಯಿಂದ ಪ್ರಾರಂಭವಾಗಿದೆ?
— ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ

155. ಏನನ್ನು ಅರಿತು ಧರ್ಮವೆ ಜಯವೆಂಬ ದಿವ್ಯಮಂತ್ರವನ್ನು ಪಠಿಸಬೇಕು? — ಮರ್ಮವನ್ನು

156. 'ಪರಮ ಜ್ಞಾನಿಗಳ ದಯ ಸಂಪಾದಿಸಬೇಕು' ಇದಕ್ಕೆ ಯಾರ ಸಂಗದಲ್ಲಿರಬೇಕು? — ಹರಿದಾಸರ

157. 'ಸಂಸಾರವೆಂಬಂಥ ಭಾಗ್ಯವಿರಲಿ' ಎಂಬ ಕೃತಿಯಲ್ಲಿ ಹರಿದಾಸರನ್ನು ಯಾರು ಎಂದಿರುವರು? — ಇಷ್ಟಬಾಂಧವರು

158. 'ಹಾವಿಗೆ ಹಾಲೆರದರೇನು ಫಲ' ಈ ಪಲ್ಲವಿಯ ಮೊದಲ ವಾಕ್ಯ ಏನು? — ಬೇವು ಬೆಲ್ಲದೊಳಿಡಲೇನು ಫಲ.

159. 'ಜಾಲಿಯ ಮರದಂತೆ ಧರೆಯೊಳು' - ದಾಸರು ಯಾರೆಂದು ಹೇಳಿದರು? — ದುರ್ಜನರು

160. 'ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ - ಲೇಸು' ಏನು? — ಜಗಳವೇ

161. 'ಆರು ಹಿತವರು ನಿನಗೆ, ನಾರಿಯೋ ...... ಬಲುಧನದ ಸಿರಿಯೋ' ಏನು? — ಧಾರುಣಿಯೋ

162. 'ಮುತ್ತೈದೆಯಾಗಿರಬೇಕು ಮುದದಿಂದಲಿ' ಎಂಬ ದೇವರನಾಮದಲ್ಲಿ ಗುರುವಿಂದ ಶಾಸ್ತ್ರವನ್ನು ಓದುವುದೆ ಏನೆಂದು ತಿಳಿಸಿದರು?
— ಮಾಂಗಲ್ಯವೆಂದು

163. 'ಬುದ್ಧಿಮಾತು ಹೇಳಿದರೆ ಕೇಳಬೇಕಮ್ಮ ಮಗಳೆ' ಎಂಬ ದೇವರನಾಮದಲ್ಲಿ ಹತ್ತು ಮಂದಿ ಒಪ್ಪುವ ಹಾಗೆ ಏನನ್ನು ಮಾಡಬೇಕೆಂದರು?
— ನುಡಿಯಬೇಕಮ್ಮ

164. 'ಬಿನ್ನಹಕೆ ಬಾಯಿಲ್ಲವಯ್ಯಾ' ಎಂಬ ದೇವರನಾಮದಲ್ಲಿ ಕಡೆಯನುಡಿಯಲ್ಲಿ ಏನನ್ನು ಬಿಡಲು ಆದೇಶವಿತ್ತಿರುವರು?
— ದುರಾಶೆಯನ್ನು

165. ಸೋಮಶೇಖರ ತನ್ನ ಸತಿಗೆ ಹೇಳಿದ ಮಂತ್ರ ಯಾವುದೆಂದರು? — ರಾಮಮಂತ್ರ

166. 'ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ' ಯಾದರೆ ವಿಠಲನಾಮ ಯಾವುದು? — ತುಪ್ಪ

167. 'ಕಲ್ಲುಸಕ್ಕರೆ ಸವಿ ಬಲ್ಲವರೆ ಬಲ್ಲರು' ಈ ಕಲ್ಲುಸಕ್ಕರೆ ಯಾವದು? — ಕೃಷ್ಣನಾಮ

168. 'ಉದಯಾಸ್ತಮಾನವೆಂಬ ಎರಡು ಕೊಳಗದಲ್ಲಿ' ಏನನ್ನು ಅಳೆಯುವ ಸಂಕೇತವೆಂದರು? — ಆಯುಷ್ಯ

169. 'ಮುಳ್ಳುಕೊನೆಯ ಮೇಲೆ ಮೂರು ಕೆರೆಯ ಕಟ್ಟಿ' ಈ ಕೃತಿಯನ್ನು ಯಾವ ಸಾಹಿತ್ಯ ಗುಂಪಿನಲ್ಲಿ ಸೇರಿಸಿರುವರು? — ಮುಂಡಿಗೆ

170. 'ಕುರುಡು ನಾಯಿ ತಾ ಸಂತೆಗೆ ಬಂತಂತೆ' ಬಂದು ಏನು ಮಾಡಿತು? — ಪುರಂದರವಿಠಲನ ಮರೆತು ಭಂಗ ಬಹಳಪಟ್ಟಿತಂತೆ.

171. ದಾಸಸಾಹಿತ್ಯ ಪ್ರಪಂಚದಲ್ಲಿ ಕೋಟಿ ಕೋಟಿಗೆ ಒಬ್ಬರಾಗಿ ಹುಟ್ಟಿ ಬಂದ ವ್ಯಕ್ತಿಗಳು ಯಾರು? — ಶ್ರೀಪುರಂದರದಾಸರು

---